# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1701+1601
ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ ಮತ್ತು ಶ್ರೀ ಗೋವಿಂದ ರಾಜು
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.03.2026

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಮಹಿಳೆಯರಿಗೆ ಉಚಿತ ಸಾರಿಗೆ ಸೌಲಭ್ಯ ಎಂದಿನಿಂದ ಆರಂಭವಾಯಿತು;</td><td rowspan="2">ರಾಜ್ಯ ಸರ್ಕಾರದ ಮಹತ್ವಾಂಕ್ಷಿ ಯೋಜನೆಯಾದ ಶಕ್ತಿ ಯೋಜನೆಯು ದಿನಾಂಕ:11.06.2023ರಿಂದ ಆರಂಭವಾಗಿದ್ದು, ಜಾರಿಯಾದ ದಿನಾಂಕ:11.06.2023 ರಿಂದ ಫೆಬ್ರವರಿ-2026 ರವರೆಗೆ ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act,1950) ರಡಿ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ 680.87 ಕೋಟಿ ಮಹಿಳಾ ಫಲಾನುಭವಿಗಳು ಪ್ರಯಾಣಿಸಿದ್ದು, ಈ ಯೋಜನೆಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಾಗೂ ಬಿಡುಗಡೆಗೆ ಬಾಕಿ ಇರುವ ಅನುದಾನದ ವಿವರಗಳನ್ನು 'ಅನುಬಂಧ-ದಲ್ಲಿ ನೀಡಲಾಗಿದೆ.</td></tr>
<tr><td>ಆ.</td><td>ಸದರಿ ದಿನಾಂಕದಿಂದ ಇಲ್ಲಿಯವರೆಗೆ ತಿಂಗಳುವಾರು ಎಷ್ಟು ಹಣವನ್ನು ಸಾರಿಗೆ ಇಲಾಖೆಗೆ ಸರ್ಕಾರದಿಂದ ಸಂದಾಯವಾಗಿದೆ; ಸಂದಾಯವಾಗಿದ್ದಲ್ಲಿ, ತಿಂಗಳುವಾರು ಬೇಡಿಕೆ ಮತ್ತು ಸಂದಾಯದ ವಿವರ ಒದಗಿಸುವುದು;</td></tr>
<tr><td>ಇ.</td><td>ಪ್ರಸ್ತುತ ಸಾರಿಗೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಹೇಗಿದೆ ಹಾಗೂ ಸಾರಿಗೆ ಸಂಸ್ಥೆಯಿಂದ ಪಾವತಿಸಲಾಗುತ್ತಿರುವ ಮಾಸಿಕ ಬಡ್ಡಿ ಹಣವೆಷ್ಟು;</td><td>ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಶಕ್ತಿ ಯೋಜನೆಯಡಿ ಅನುದಾನವನ್ನು ಪ್ರತಿ ಮಾಹೆಯಾನ ಮುಂಗಡವಾಗಿ ಬಿಡುಗಡೆ ಮಾಡುತ್ತಿದ್ದು, ಫೆಬ್ರವರಿ-2026ರ ಮಾಹೆಯವರೆಗೆ ಈಗಾಗಲೇ ಬಿಡುಗಡೆಯಾಗಿರುತ್ತದೆ.</td></tr>
<tr><td>ಈ.</td><td>ಸರ್ಕಾರದಿಂದ ಸರಿಯಾದ ಸಮಯಕ್ಕೆ ಸಂಸ್ಥೆಗೆ ಹಣ ಬಾರದೇ ಇರುವುದರಿಂದ ಸಾರಿಗೆ ಸಂಸ್ಥೆಯು ಆರ್ಥಿಕವಾಗಿ ಮತ್ತು ದಿನನಿತ್ಯದ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಮುಂದುವರೆದು, ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳು ನಷ್ಟದಲ್ಲಿದ್ದು, ನಾಲ್ಕು ಸಾರಿಗೆ ಸಂಸ್ಥೆಗಳು ಹೊಸ ಬಸ್‌ಗಳ ಖರೀದಿಗಾಗಿ, ಇಂಧನ ವೆಚ್ಚ, ಸಂಸ್ಥೆಯ ಬಂಡವಾಳ ವೆಚ್ಚಗಳಿಗೆ ಹಾಗೂ ಭವಿಷ್ಯ ನಿಧಿ ಬಾಕಿ ತೀರುವಳಿಗೆ ಪಡೆಯಲಾಗಿರುವ ಸಾಲಕ್ಕೆ ಕಳೆದ 5 ವರ್ಷಗಳಲ್ಲಿ ಪಾವತಿಸಲಾದ ಸರಾಸರಿ ಮಾಸಿಕ ಬಡ್ಡಿ ವಿವರಗಳು ಈ ಕೆಳಕಂಡಂತಿವೆ:-<br>(ರೂ.ಕೋಟಿಗಳಲ್ಲಿ)
<table>
<tr><th colspan="2">ಕ.ರಾ.ರ.ಸಾ.ನಿಗಮ</th><th colspan="2">ವಾ.ಕ.ರ.ಸಾ.ಸಂಸ್ಥೆ</th></tr>
<tr><th>ವರ್ಷ</th><th>ಮಾಸಿಕ ಬಡ್ಡಿ</th><th>ವರ್ಷ</th><th>ಮಾಸಿಕ ಬಡ್ಡಿ</th></tr>
<tr><td>2020-21</td><td>2.63</td><td>2020-21</td><td>1.82</td></tr>
<tr><td>2021-22</td><td>2.13</td><td>2021-22</td><td>1.77</td></tr>
<tr><td>2022-23</td><td>1.63</td><td>2022-23</td><td>1.45</td></tr>
<tr><td>2023-24</td><td>1.20</td><td>2023-24</td><td>1.08</td></tr>
<tr><td>2024-25</td><td>1.97</td><td>2024-25</td><td>0.73</td></tr>
<tr><th colspan="2">ಬೆಂ.ಮ.ಸಾ.ಸಂಸ್ಥೆ</th><th colspan="2">ಕ.ಕ.ರ.ಸಾ.ನಿಗಮ</th></tr>
<tr><th>ವರ್ಷ</th><th>ಮಾಸಿಕ ಬಡ್ಡಿ</th><th>ವರ್ಷ</th><th>ಮಾಸಿಕ ಬಡ್ಡಿ</th></tr>
<tr><td>2020-21</td><td>4.80</td><td>2020-21</td><td>0.62</td></tr>
<tr><td>2021-22</td><td>5.69</td><td>2021-22</td><td>0.48</td></tr>
<tr><td>2022-23</td><td>4.99</td><td>2022-23</td><td>0.61</td></tr>
<tr><td>2023-24</td><td>4.01</td><td>2023-24</td><td>1.08</td></tr>
<tr><td>2024-25</td><td>2.24</td><td>2024-25</td><td>1.33</td></tr>
</table>
</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

**ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 2023ನೇ ಮೇ ವರೆಗೆ ಒಟ್ಟು ರೂ.4099.38 ಕೋಟಿಗಳ ಹೊಣೆಗಾರಿಕೆ ಬಾಕಿ ಇದ್ದುದ್ದರಿಂದ (ಸಾಲದ ಬಾಕಿ ಹೊಣೆಗಾರಿಕೆ ಒಳಗೊಂಡಂತೆ), ಸದರಿ ಬಾಕಿಯು ನಿಗಮಗಳ ತೀವ್ರ ಆರ್ಥಿಕ ಹಿನ್ನೆಡೆಗೆ ಕಾರಣವಾಗಿತ್ತು. ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ಮತ್ತು ಸರಬರಾಜುದಾರರ/ ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು.**

ಮೇ 2023 ರವರೆಗೆ ನಿಗಮವಾರು ಬಾಕಿಯಿದ್ದ ಹೊಣೆಗಾರಿಕೆಯ ವಿವರ ಕೆಳಕಂಡಂತಿದೆ:-

**(ರೂ. ಕೋಟಿಗಳಲ್ಲಿ)**

| ನಿಗಮ/ ಸಂಸ್ಥೆ | ಬಾಕಿ ಹೊಣೆಗಾರಿಕೆ ಮೊತ್ತ |
|---|---|
| ಕ.ರಾ.ರ.ಸಾ.ನಿಗಮ | 1211.18 |
| ಬೆಂ.ಮ.ಸಾ.ಸಂಸ್ಥೆ | 1383.86 |
| ವಾ.ಕ.ರ.ಸಾ.ಸಂಸ್ಥೆ | 1253.01 |
| ಕ.ಕ.ರ.ಸಾ.ನಿಗಮ | 251.33 |
| **ಒಟ್ಟು** | **4099.38** |

2023ರ ಮೇ ತಿಂಗಳ ನಂತರ ದಿನನಿತ್ಯ ಡೀಸೆಲ್ ತೈಲ ಬೆಲೆ ಹೆಚ್ಚಳದೊಂದಿಗೆ ಸಿಬ್ಬಂದಿಗಳ ವೇತನ ಹೆಚ್ಚಳ, ವಾಹನ ಬಿಡಿ ಭಾಗಗಳ ವೆಚ್ಚ ಒಳಗೊಂಡಂತೆ ಒಟ್ಟು ಕಾರ್ಯಾಚರಣೆ ವೆಚ್ಚ ಹೆಚ್ಚಾಗಿ ನಿಗಮಗಳಿಗೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗಿದೆ.

ಮೇಲ್ಕಂಡ ಅಂಶಗಳನ್ನು ಗಮನಿಸಿ, ನಿಗಮಗಳ ಬಾಕಿ ಹೊಣೆಗಾರಿಕೆಯನ್ನು ಕಡಿಮೆ ಮಾಡಲು ಹಾಗೂ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಡಗೊಳಿಸಲು ಸರ್ಕಾರದಿಂದ ನಾಲ್ಕು ನಿಗಮಗಳಿಗೆ ಈ ಕೆಳಕಂಡಂತೆ ಸಹಾಯಹಸ್ತ ನೀಡಲಾಗಿದೆ.

- ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮ/ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ 2023-24 ರಿಂದ 2025-26ರವರೆಗೆ ಖರೀದಿಸಿರುವ/ ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:

| ಸಂಸ್ಥೆಗಳು | 2023-24 (Jan) | 2024-25 | 2025-26 | ಒಟ್ಟು |
|---|---|---|---|---|
| ಕ.ರಾ.ರ.ಸಾ. ನಿಗಮ | 510 | 698 | 10+60*<br>+45** | 1323 |
| ಬೆಂ.ಮ.ಸಾ. ಸಂಸ್ಥೆ | 20 ಡೀಸೆಲ್ | 820 ಡೀಸೆಲ್ | - | 2365 |
| | 341 ಇ.ವಿ | 755 ಇ.ವಿ | 429 ಇ.ವಿ | |
| ವಾ.ಕ.ರ.ಸಾ. ಸಂಸ್ಥೆ | 296 | 560 | 11+<br>354*** | 1221 |
| ಕ.ಕ.ರ.ಸಾ. ನಿಗಮ | 720 | 307 | 146 | 1173 |
| **ಒಟ್ಟು** | **1887** | **3140** | **1055** | **6082** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

*ಪ್ರಸಕ್ತ 2025-26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 60 ನಾನ್ ಎ.ಸಿ. ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು, ಸದರಿ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

** ನಿಗಮಕ್ಕೆ 45 ಸಂಖ್ಯೆಯ ಕರ್ನಾಟಕ ಸಾರಿಗೆ ಮಾದರಿಯ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

***ಪ್ರಸಕ್ತ 2025-26ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 354 ಹೊಸ ಬಸ್‌ಗಳನ್ನು ಖರೀದಿಸಲು ಖರೀದಿ ಆದೇಶ ನೀಡಿದ್ದು, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

ಮುಂದುವರೆದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಮಾರ್ಚ್-2026ರ ನಂತರ ಸಾರಿಗೆ ನಿಗಮಗಳಿಗೆ ಸೇರ್ಪಡೆಗೊಳ್ಳಲಿರುವ ಒಟ್ಟು ಬಸ್‌ಗಳು ವಿವರ ಕೆಳಕಂಡಂತಿರುತ್ತದೆ:

| ಸಂಸ್ಥೆ/ನಿಗಮ | ಬಸ್‌ಗಳ ಸಂಖ್ಯೆ | ಬಸ್‌ಗಳ ವಿವರ |
|---|---|---|
| ಕ.ರಾ.ರ.ಸಾ.ನಿಗಮ | 644 | 500 ಗ್ರಾಮಾಂತರ+ 144 ಡಬಲ್ ಡೋರ್ (ನಗರ) |
| ವಾ.ಕ.ರ.ಸಾ.ಸಂಸ್ಥೆ | 150 | ಗ್ರಾಮಾಂತರ ಬಸ್‌ಗಳು |
| ಕ.ಕ.ರ.ಸಾ.ನಿಗಮ | 56 | ವಿವಿಧ ರೀತಿಯ ಪ್ರೀಮಿಯಂ ಬಸ್‌ಗಳು |
| **ಒಟ್ಟು** | **850** | |

- 2025-26ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 469(iii)ರಲ್ಲಿ ರಾಜ್ಯದ ವಿವಿಧ ಸಾರಿಗೆ ನಿಗಮಗಳಿಗೆ 2000 ಸಂಖ್ಯೆಯ ಹೊಸ ಡೀಸೆಲ್ ಬಸ್ಸುಗಳನ್ನು ಸೇರ್ಪಡೆಗೊಳಿಸಲಾಗುವುದು ಎಂದು ಘೋಷಿಸಿದ್ದು, ಅದರನ್ವಯ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 900, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 700 ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400ರಂತೆ, ಒಟ್ಟು 2000 ಸಂಖ್ಯೆಯ ಹೊಸ ಬಿ.ಎಸ್-VI ಡೀಸೆಲ್ ಬಸ್ಸುಗಳನ್ನು ಹಂಚಿಕೆ ಮಾಡಲಾಗಿದೆ.

ಅದರಲ್ಲಿ ಈಗಾಗಲೇ 300 ಡೀಸೆಲ್ ಬಸ್ಸುಗಳನ್ನು ರೂ.12353.00 ಲಕ್ಷಗಳ ಅನುದಾನದಲ್ಲಿ ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 21 ಟಿಸಿಬಿ 2025, ದಿನಾಂಕ:21.04.2025 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸರ್ಕಾರದಿಂದ ನೀಡಿದ ರೂ.123.53 ಕೋಟಿ ಅನುದಾನದಲ್ಲಿ 330 ಬಸ್ಸುಗಳನ್ನು ಖರೀದಿಸಲು ಖರೀದಿ ಆದೇಶ ನೀಡಲಾಗಿದ್ದು, ಮಾರ್ಚ್-2026ರೊಳಗೆ ಎಲ್ಲಾ ಬಸ್‌ಗಳು ನಿಗಮಕ್ಕೆ ಸೇರ್ಪಡೆಗೊಳ್ಳಲಿವೆ.

ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 500 ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 150 ಸಂಖ್ಯೆಯ ಪೂರ್ಣ ನಿರ್ಮಿತ ಬಿ.ಎಸ್-VI ಕರ್ನಾಟಕ Mofussil ಸಾರಿಗೆ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಬಸ್ಸುಗಳನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 33 ಟಿಸಿಬಿ 2025, ದಿನಾಂಕ: 30.01.2026ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕುರಿತು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಉಳಿದ 620 ಬಸ್ಸುಗಳಿಗೆ ಅನುದಾನ ನೀಡುವಂತೆ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಬಸ್ಸುಗಳ ಖರೀದಿಗೆ ಅನುದಾನ ಮಂಜೂರಾತಿ ಕೋರಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ನಿರೀಕ್ಷಿಸಲಾಗಿದೆ.<br><br>• ಕೇಂದ್ರ ಸರ್ಕಾರದ PM e-sewa ಯೋಜನೆಯಡಿಯಲ್ಲಿ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಿಗೆ ಒಟ್ಟು 750 ವಿದ್ಯುತ್ ಚಾಲಿತ ಬಸ್ಸುಗಳು ಮತ್ತು PM e-drive ಯೋಜನೆಯಡಿ ಬೆಂ.ಮ.ಸಾ.ಸಂಸ್ಥೆಗೆ 4500 ವಿದ್ಯುತ್ ಚಾಲಿತ ಬಸ್ಸುಗಳನ್ನು GCC ಮಾದರಿಯಲ್ಲಿ ಆಚರಣೆ ಮಾಡಲು ಮಂಜೂರಾತಿ ದೊರೆತಿದ್ದು, ಮುಂದಿನ ದಿನಗಳಲ್ಲಿ ಸೇರ್ಪಡೆಗೊಳಿಸಲು ಯೋಜಿಸಲಾಗಿರುತ್ತದೆ.<br>• 2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 480 ರಲ್ಲಿ ನಾಲ್ಕು ಸಾರಿಗೆ ನಿಗಮಗಳಿಗೆ 1000 ಡೀಸೆಲ್ ಬಸ್‌ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.<br>• ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ನವೆಂಬರ್-2024ರ ಅಂತ್ಯಕ್ಕೆ ಬಾಕಿ ಉಳಿಸಿಕೊಂಡಿರುವ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನ ಬಾಕಿ ಮೊತ್ತ ಪಾವತಿಸಲು ಸರ್ಕಾರದ ಖಾತರಿ/ ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ರೂ.2000/- ಕೋಟಿ ಸಾಲ ಪಡೆಯಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 45 ಟಿಸಿಬಿ 2023, ದಿನಾಂಕ:31.12.2024ರಲ್ಲಿ ಅನುಮೋದನೆ ನೀಡಲಾಗಿದೆ ಹಾಗೂ ಸದರಿ ಸಾಲದ ಮೊತ್ತವನ್ನು ಸಂಪೂರ್ಣವಾಗಿ ಸರ್ಕಾರವೇ ಮರು ಪಾವತಿಸುತ್ತದೆ.<br><br>**(ರೂ. ಕೋಟಿಗಳಲ್ಲಿ)**<br>ಸಂಸ್ಥೆ/ನಿಗಮ — ಮೊತ್ತ<br>ಕ.ರಾ.ರ.ಸಾ.ನಿಗಮ — 623.80<br>ಬೆಂ.ಮ.ಸಾ.ಸಂಸ್ಥೆ — 589.20<br>ವಾ.ಕ.ರ.ಸಾ.ಸಂಸ್ಥೆ — 646.00<br>ಕ.ಕ.ರ.ಸಾ.ನಿಗಮ — 141.00<br>**ಒಟ್ಟು — 2000.00**<br><br>2025-26ನೇ ಸಾಲಿನಲ್ಲಿ ಸದರಿ ರೂ.2000 ಕೋಟಿ ಸಾಲದ ಮೊತ್ತದ ಅಸಲು ಮತ್ತು ಬಡ್ಡಿ ಪಾವತಿಗಾಗಿ ನಾಲ್ಕು ಸಾರಿಗೆ ನಿಗಮಗಳಿಗೆ ಒಟ್ಟು ರೂ.452.00 ಕೋಟಿಗಳ ಅನುದಾನವನ್ನು ಸಹ ಒದಗಿಸಲಾಗಿದ್ದು, ಅದರಂತೆ ತ್ರೈಮಾಸಿಕವಾರು ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>

- ನಾಲ್ಕು ಸಾರಿಗೆ ಸಂಸ್ಥೆಗಳಿಗೆ ದಿನಾಂಕ:01.01.2020 ರಿಂದ ದಿನಾಂಕ:28.02.2023 ರವರೆಗಿನ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ/ ನೌಕರರಿಗೆ ದಿನಾಂಕ:01.01.2020ರ ಪರಿಷ್ಕೃತ ವೇತನ ಶ್ರೇಣಿಯನ್ವಯ ಪಾವತಿಸಬೇಕಾದ ಉಪಧನ ಹಾಗೂ ಗಳಿಕೆ ರಜೆ ನಗದೀಕರಣದ ವ್ಯತ್ಯಾಸ ಮೊತ್ತದ ಪಾವತಿಗಾಗಿ ಒಟ್ಟು ರೂ.224.05 ಕೋಟಿಗಳನ್ನು ನಿಗಮವಾರು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಅದರಂತೆ ನಿವೃತ್ತ ನೌಕರರಿಗೆ ಈಗಾಗಲೇ ಪಾವತಿ ಮಾಡಲಾಗಿರುತ್ತದೆ:-

**(ರೂ.ಕೋಟಿಗಳಲ್ಲಿ)**

<table>
<tr><th>ಸಂಸ್ಥೆ</th><th>ಅನುದಾನ</th></tr>
<tr><td>ಕ.ರಾ.ರ.ಸಾ.ನಿಗಮ</td><td>86.55</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>50.25</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>51.50</td></tr>
<tr><td>ಕ.ಕ.ರ.ಸಾ.ನಿಗಮ</td><td>35.75</td></tr>
<tr><td>ಒಟ್ಟು</td><td>224.05</td></tr>
</table>

- ನಾಲ್ಕು ಸಾರಿಗೆ ನಿಗಮಗಳ ನಗದು ಕೊರತೆಯನ್ನು ನಿಭಾಯಿಸಲು 2023-24 ಮತ್ತು 2024-25ನೇ ಸಾಲಿನಲ್ಲಿ ನಿಗಮಗಳು ಕ್ರಮವಾಗಿ ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.581.47 ಕೋಟಿ ಮತ್ತು ರೂ.637.76 ಕೋಟಿ ಸೇರಿದಂತೆ ಒಟ್ಟು ರೂ.1219.23 ಕೋಟಿಗಳ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.
- ನಾಲ್ಕು ನಿಗಮಗಳ ನೌಕರರಿಗೆ ದಿನಾಂಕ:01.01.2021ರಿಂದ 28.02.2023ರವರೆಗೆ ಒಟ್ಟು 26 ತಿಂಗಳ ಹಿಂಬಾಕಿ ಮೊತ್ತ ರೂ.1271.92 ಕೋಟಿಗಳನ್ನು ಪಾವತಿಸಲು ಹಾಗೂ ದಿನಾಂಕ:01.04.2025 ರಿಂದ ಜಾರಿಗೆ ಬರುವಂತೆ ಶೇಕಡಾವಾರು ಎಷ್ಟು ಪ್ರಮಾಣದಲ್ಲಿ ಪರಿಷ್ಕರಿಸುವ ಕುರಿತು ಕಾರ್ಮಿಕ ಸಂಘಟನೆಗಳ ಜೊತೆ ಚರ್ಚಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023, ದಿನಾಂಕ:18.02.2026ರಲ್ಲಿ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.

</td></tr>
<tr><td>ಉ.</td><td>ಸಾರಿಗೆ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ವೇತನ ಪರಿಷ್ಕರಣೆ ಯಾವ ವರ್ಷದಲ್ಲಿ ಆಗಬೇಕಿತ್ತು ಹಾಗೂ ವೇತನ ಪರಿಷ್ಕರಣೆ ಮಾಡಲಾಗಿದೆಯೇ;</td><td rowspan="2">ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗೆ ಅಧಿಕಾರಿ/ ನೌಕರರಿಗೆ ಕೈಗಾರಿಕಾ ಒಪ್ಪಂದದನ್ವಯ ನಾಲ್ಕು ವರ್ಷಗಳಿಗೊಮ್ಮೆ ಒಪ್ಪಂದವನ್ನು (ಅಗ್ರಿಮೆಂಟ್) ಪರಿಷ್ಕರಿಸಬೇಕಾಗಿರುತ್ತದೆ. ಅದರಂತೆ 2016ರಲ್ಲಿ ವೇತನ ಪರಿಷ್ಕರಣೆಯಾಗಿದ್ದು, ತದನಂತರ 2020ನೇ ವರ್ಷದಲ್ಲಿ ವೇತನ ಪರಿಷ್ಕರಣೆ ಮಾಡಬೇಕಾಗಿತ್ತು. ಆದರೆ, ಸರ್ಕಾರದ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023, ದಿನಾಂಕ:17.03.2023ರಲ್ಲಿ ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ ಸೆಕ್ಷನ್ 34(1)ರನ್ವಯ ದಿನಾಂಕ:01.03.2023 ರಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಮತ್ತು ಪೂರ್ವ ಕಿಂಕೋ ಅಧಿಕಾರಿಗಳು/ ನೌಕರರೂ ಸೇರಿದಂತೆ ದಿನಾಂಕ:31.12.2019 ರಂದು ಪಡೆಯುತ್ತಿದ್ದ ಮೂಲ ವೇತನವನ್ನು</td></tr>
<tr><td>ಊ.</td><td>ನೌಕರರಿಗೆ ಬಹಳ ವರ್ಷಗಳಿಂದ ವೇತನ ಪರಿಷ್ಕರಣೆ ಮಾಡದೇ ಇರುವುದರಿಂದ ನೌಕರರು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿ ಕಷ್ಟ ಅನುಭವಿಸುತ್ತಿರುವುದು</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | ಸರ್ಕಾರದ ಗಮನಕ್ಕೆ ಬಂದಿದೆಯೇ? | ಶೇ.15ರಷ್ಟು ಹೆಚ್ಚಿಸಿ, ಅದರಂತೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:01.03.2023 ರಿಂದ ಜಾರಿಗೊಳಿಸಲಾಗಿದೆ. ಆದರೆ, **ಸದರಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಅಧಿಕಾರಿ/ನೌಕರರಿಗೆ ವೇತನವನ್ನು ಪಾವತಿಸಲು ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಮೀಸಲಿರಿಸಿರಲಿಲ್ಲ ಹಾಗೂ ನಿಗಮಗಳಿಗೆ ಅನುದಾನ ಬಿಡುಗಡೆ ಮಾಡಿರಲಿಲ್ಲ. ಇದರಿಂದ, ನಿಗಮಗಳು ತೀವ್ರ ಒತ್ತಡಕ್ಕೆ ಸಿಲುಕಿದ್ದವು.**<br>ಅಲ್ಲದೇ, ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act,1950) ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ.<br>ಮೇ-2023ರವರೆಗೆ ನಿಗಮಗಳಲ್ಲಿ ಬಾಕಿ ಇದ್ದ ಹೊಣೆಗಾರಿಕೆಗಳಿಂದ ನಿಗಮಗಳ ತೀವ್ರ ಆರ್ಥಿಕ ಹಿನ್ನಡೆಗೆ ಕಾರಣವಾಗಿತ್ತು ಹಾಗೂ ಸಾರಿಗೆ ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ನ್ಯಾಸ ಮಂಡಳಿಗೆ ಬಾಕಿ ಮೊತ್ತ, ನಿವೃತ್ತ ನೌಕರರಿಗೆ ಉಪಧನ, ಬ್ಯಾಂಕ್ ಸಾಲ ಮತ್ತು ಸರಬರಾಜುದಾರರ/ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು. ಹಾಗಾಗಿ, ಹೊಸ ಬಸ್ಸುಗಳನ್ನು ಖರೀದಿಸಲು ಮತ್ತು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಆದ್ಯತೆ ನೀಡಬೇಕಾಗಿತ್ತು.<br>ಆದ್ದರಿಂದ, ಸಾರಿಗೆ ನಿಗಮಗಳ ನೌಕರರಿಗೆ ಕಳೆದ ಬಾರಿಯ 38 ತಿಂಗಳ ವೇತನ ಹಿಂಬಾಕಿ ಹಾಗೂ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ 2020ರಿಂದ 2022ರವರೆಗಿನ ಕೋವಿಡ್-19ರ ಹಿನ್ನಲೆಯಲ್ಲಿ ಹಾಗೂ ಸಾರಿಗೆ ನಿಗಮಗಳ ಆರ್ಥಿಕ ಪರಿಸ್ಥಿತಿ ಹಾಗೂ ಹೊಣೆಗಾರಿಕೆಗಳನ್ನು ಪರಿಗಣಿಸಿ, ವೇತನ ಪರಿಷ್ಕರಣೆ ಕುರಿತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಬಂಧ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ದಿನಾಂಕ:04.07.2025, 04.08.205 ಮತ್ತು 26.11.2025ರಂದು ಸಭೆ ನಡೆಸಿ ಬೇಡಿಕೆಗಳ ಬಗ್ಗೆ ಚರ್ಚಿಸಿರುತ್ತಾರೆ ಹಾಗೂ ದಿನಾಂಕ:13.12.2025ರಂದು ಕಾರ್ಮಿಕ ಸಂಘಟನೆಯವರೊಂದಿಗೆ ಸಭೆ ನಡೆಸಿ ಅವರ ಅಹವಾಲುಗಳನ್ನು ಪಡೆದು ಪರಿಶೀಲಿಸಿ, ದಿನಾಂಕ:01.01.2021ರಿಂದ 28.02.2023ರವರೆಗೆ ಒಟ್ಟು 26 ತಿಂಗಳ ಹಿಂಬಾಕಿ ಮೊತ್ತ ರೂ.1271.92 ಕೋಟಿಗಳನ್ನು ಪಾವತಿಸಲು ಹಾಗೂ ದಿನಾಂಕ:01.04.2025 ರಿಂದ ಜಾರಿಗೆ ಬರುವಂತೆ ಶೇಕಡಾವಾರು ಎಷ್ಟು ಪ್ರಮಾಣದಲ್ಲಿ ಪರಿಷ್ಕರಿಸುವ ಕುರಿತು ಕಾರ್ಮಿಕ ಸಂಘಟನೆಗಳ ಜೊತೆ ಚರ್ಚಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023, ದಿನಾಂಕ:18.02.2026ರಲ್ಲಿ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ. |

ಸಂಖ್ಯೆ: ಟಿಡಿ 90 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

| ತಿಂಗಳು | 4 ಸಂಸ್ಥೆ/ನಿಗಮ | | | |
|---|---|---|---|---|
| | ಫಲಾನುಭವಿಗಳ ಸಂಖ್ಯೆ | ಪ್ರಯಾಣ ವೆಚ್ಚ | ಬಿಡುಗಡೆಯಾದ ಅನುದಾನ | ಕೊರತೆ |
| ಜೂನ್-23 | 104367463 | 2509643365 | 1959999000 | 549644365 |
| ಜುಲೈ-23 | 197299759 | 4565866115 | 2947400000 | 1618466115 |
| ಆಗಸ್ಟ್-23 | 201152574 | 4620286281 | 2947400000 | 1672886281 |
| ಅಕ್ಟೋಬರ್-23 | 183906486 | 4688442413 | 2944900000 | 1743542413 |
| ನವೆಂಬರ್-23 | 185337078 | 4566536198 | 2947400000 | 1619136198 |
| ಡಿಸಂಬರ್-23 | 197162691 | 4750376636 | 2947400000 | 1802976636 |
| ಜನವರಿ-24 | 193915965 | 4622577055 | 2947400000 | 1675177055 |
| ಪೆಭ್ರವರಿ-24 | 186567018 | 4483145131 | 2947400000 | 1535745131 |
| ಮಾರ್ಚ್-24 | 187774232 | 4529167350 | 2463301000 | 2065866350 |
| ಮಾರ್ಚ್-24(ಹೆಚ್ಚುವರಿ) | 0 | 0 | 3997500000 | |
| ಏಪ್ರಿಲ್-24 | 184378630 | 4815318711 | 4179166000 | 636152711 |
| ಮೇ-24 | 196684686 | 5191415428 | 4179166000 | 1012249428 |
| ಜೂನ್-24 | 199957914 | 4859717415 | 4179166000 | 680551415 |
| ಜುಲೈ-24 | 204784547 | 4706634650 | 4179166000 | 527468650 |
| ಆಗಸ್ಟ್-24 | 211202425 | 4940102434 | 4179166000 | 760936434 |
| ಸೆಪ್ಟೆಂಬರ್-24 | 204970992 | 4791434352 | 4179166000 | 612268352 |
| ಅಕ್ಟೋಬರ್-24 | 201448829 | 5087572842 | 4179166000 | 908406842 |
| ನವೆಂಬರ್-24 | 208547118 | 5118943473 | 4179166000 | 939777473 |
| ಡಿಸಂಬರ್-24 | 211517181 | 5157655952 | 4179166000 | 978489952 |
| ಜನವರಿ-25 | 211069458 | 5712963065 | 4179166000 | 1533797065 |
| ಫೆಭ್ರವರಿ-25 | 197510998 | 5603852315 | 4179166000 | 1424686315 |
| ಮಾರ್ಚ್-25 | 214401474 | 5868949168 | 1938674000 | 3930275168 |
| ಮಾರ್ಚ್-25 | 0 | 0 | 2240500000 | |
| ಏಪ್ರಿಲ್-25 | 214971509 | 6474521798 | 4419999500 | 2054522298 |
| ಮೇ-25 | 222190094 | 6709543390 | 4419999500 | 2289543890 |
| ಜೂನ್-25 | 220325519 | 6182896071 | 4416666000 | 1766230071 |
| ಜುಲೈ-25 | 234914313 | 6243542693 | 4416666000 | 1826876693 |
| ಆಗಸ್ಟ್-25 | 235048003 | 6438093892 | 4416666000 | 2021427892 |
| ಸೆಪ್ಟೆಂಬರ್-25 | 236495857 | 6302270899 | 4416666000 | 1885604899 |
| ಅಕ್ಟೋಬರ್-25 | 238137504 | 6964485959 | 4416666000 | 2547819959 |
| ನವೆಂಬರ್-25 | 239309823 | 6578974211 | 4416666000 | 2162308211 |
| ಡಿಸೆಂಬರ್-25 | 239730926 | 6557908856 | 4416666000 | 2141242856 |
| ಜನವರಿ-26 | 234027304 | 6434955378 | 4416666000 | 2018289378 |
| ಫೆಬ್ರುವರಿ-26 | 216449420 | 5929586173 | 4416666000 | 1512920173 |
| ಒಟ್ಟು(3 ವರ್ಷ) | 6808737634 | 176474997255 | 130737493000 | 45737504255 |